**ಸಾಕ್ಷಿಯನ್ನು ದಿಃ 15.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಕೆಎ-09-ಹೆಚ್.ಎಕ್ಸ್-9223 ಸ್ಕೂಟರ್ ನಿಂದಲೇ ಅಪಘಾತ ಆಗಿದೆ ಎಂದು ಪೋಲೀಸರು ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎನ್ನುತ್ತಾರೆ. ಸದರಿ ದೋಷರೋಪಣಾ ಪಟ್ಟಿಯನ್ನು ನಾವು ಮೂರನೇ ಪಕ್ಷಗಾರರಾದ ಕಾರಣ ಪ್ರಶ್ನಿಸಿಲ್ಲ. ಮೃತ ಗಂಗಧಾರಯ್ಯ ರವರಿಗೆ 02.08.2021 ರಿಂದ ಅವರು ತೀರುವ ವರೆಗೂ ಜ್ಞಾನ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ಆಸ್ಪತ್ರೆ ದಾಖಲೆಗಳಲ್ಲಿ ಏನು ಬರೆಸಿದ್ದಾರೆ ಎಂದರೆ ಅವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಎರಡು ಬೈಕ್ ಗಳ ನಡುವೆ ಡಿಕ್ಕಿಯಾದರೆ ಸ್ಕಿಡ್ ಆಗಿ ಬೀಳುತ್ತಾರೆ ಎಂದರೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರೀಶಿಲಿಸಿದ್ದೇನೆ. ಆಸ್ಪತ್ರೆ ದಾಖಲೆಗಳಲ್ಲಿ ಸೆಲ್ಫ್ ಫಾಲ್ ಎಂದು ಬರೆದಿಲ್ಲ. ಮೇಲ್ಕಂಡ ಸ್ಕೂಟರ್ ಅಪಘಾದಲ್ಲಿ ಭಾಗಿಯಾಗಿಲ್ಲ ಎಂಬ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರೆದು ದಾಖಲೆಗಳಲ್ಲಿ ನಮೂದಿಲ್ಲ ಎನ್ನುತ್ತಾರೆ. ಮಾಲೀಕರಿಗೆ ನಮ್ಮ ಕಂಪನಿಯಿಂದ ನೋಟೀಸ್ ಕಳುಹಿಸಿರುವುದಿಲ್ಲ. ಆ ಬಗ್ಗೆ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ಅರ್ಜಿದಾರರು ಬಿಲ್ಲನ್ನು ಮೆಡಿಕಲ್ ಇನ್ಸೂರೆನ್ಸ್ ರವರಿಂದ ಪಡೆದ ಬಗ್ಗೆ ಮುಂದೆ ದಾಖಲೆ ಹಾಜರು ಪಡಿಸುತ್ತೇವೆ. ಸಾಮಾನ್ಯವಾಗಿ ಬಿಲ್ ಮರುಪಾವತಿ ಆದಾಗ ಮೂಲ ಬಿಲ್ಲನ್ನು ಗಾಯಾಳುಗಳಿಗೆ ಕೊಡುವುದಿಲ್ಲ ಎಂದರೆ ಸರಿಯಲ್ಲ. ಬಿಲ್ ಮರುಪಾವತಿ ಆಗಿದ್ದರೂ ಸಹ ಅರ್ಜಿದಾರರು ಬಿಲ್ ಮೊತ್ತವನ್ನು ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಯಾವ ವಿಮಾ ಕಂಪನಿಯಿಂದ ಬಿಲ್ ಮರುಪಾವತಿ ಆಗಿದೆ ಎಂದು ಈಗ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಮೆಡಿಸಿಸ್ಟ್ ಎಂಬ ಕಂಪನಿಯಿಂದ ಪಡೆದಿದ್ದರು ಎನ್ನುತ್ತಾರೆ. ಔಷಧಿ ಬಿಲ್ಲಿನ ಹಣ ಪಾವತಿಸುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಗಾಯಾಳು ಅಪಘಾತದಿಂದ ಆದ ಗಾಯದಿಂದಲೇ ಮೃತ ಪಟ್ಟಿದ್ದಾರೆ ಎಂದು ನಿಪಿ. 8 ರಲ್ಲಿ ನಮೂದಿದೆ ಎಂದರೆ ಸುಳ್ಳಾಗಿ ನಮೂದಿಸಿದ್ದಾರೆ ಎನ್ನುತ್ತಾರೆ. ಮೇಲ್ಕಂಡ ಸ್ಕೂಟರ್ ಚಾಲಕನ

ತಪ್ಪಿನಿಂದಲೇ ಅಪಘಾತ ಆಗಿರುವ ಕಾರಣ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾವು ಪರಿಹಾರ ನೀಡಲು ಭಾಧ್ಯರು ಎಂದರೆ ಸರಿಯಲ್ಲ. ಅರ್ಜಿದಾರರು ಮೃತರ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ. 1 ನೇ ವಾದಿಗೆ ಪಿಂಚಣಿ ಬರುತ್ತಿದ್ದರು ಅವರು ಪರಿಹಾರ ಪಡೆಯಲು ಭಾಧ್ಯರು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ನೀಡುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಪರಿಹಾರಕ್ಕೆ ಅರ್ಹರು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.